ಅ) ರಾಜ್ಯದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಬಗ್ಗೆ ಯಾವುದಾದರೂ ವಿದೇಶಿ ಸಂಸ್ಥೆಯಿಂದ ಪ್ರಸ್ತಾವನೆಯನ್ನು ಸರಕಾರವು ಪಡೆದಿದೆಯೇ;

ಆ) ಹಾಗಿದ್ದಲ್ಲಿ ಯಾರಿಂದ ಹಣ ಪಡೆಯಲಾಗಿದೆ ಹಾಗೂ ಆ ವಿದೇಶಿ ಸಂಸ್ಥೆಯ ಹೆಸರೇನು?

ಇ) ಪಡೆದ ಒಟ್ಟು ಹಣ ಮತ್ತು ಅದನ್ನು ಎಲ್ಲಿ ಹೇಗೆ ಬಳಸಲಾಯಿತು? (ವಿವರಗಳನ್ನು ಒದಗಿಸುವುದು).

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು):-

ಅ) ಇಲ್ಲ. ಕೇಂದ್ರ ಸರ್ಕಾರಕ್ಕೆ ಕರ್ನಾಟಕದಲ್ಲಿ ಸಮಗ್ರ ಪ್ರವಾಸೋದ್ಯಮ ಅಭಿವೃದ್ಧಿಗೆ ಯೋಜನೆ ರೂಪಿಸಿ ಸಾಗರೋತ್ತರ ಆರ್ಥಿಕ ಸಹಕಾರ ನಿಧಿಯಿಂದ ೧೯೯೨-೯೩ನೇ ಸಾಲಿಗೆ ಧನ ಸಹಾಯ ಪಡೆಯುವ ಬಗ್ಗೆ ಪ್ರಸ್ತಾಪಿಸಲಾಗಿದೆ.

ಆ) ಇನ್ನೂ ಮಂಜೂರು ಆಗಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಮೂಡಿಗೆರೆ-ಚಿಕ್ಕಬಳ್ಳಾಪುರ ರಸ್ತೆ ರಾಜ್ಯ ಹೆದ್ದಾರಿಯಾಗಿ ಪರಿವರ್ತನೆ

೩೯೮ (೧೮೮೧) ಶ್ರೀ ಜೆ. ಸಿ. ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ):- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಮೂಡಿಗೆರೆ-ಚಿಕ್ಕಬಳ್ಳಾಪುರ ರಸ್ತೆ ರಾಜ್ಯ ಹೆದ್ದಾರಿಗಳಾಗುವುದು ಎಂದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ಈ ರಸ್ತೆ ಸಾರ್ವಜನಿಕ ಓಡಾಟಕ್ಕೆ ಯೋಗ್ಯವಿಲ್ಲದ ಸ್ಥಿತಿಗೆ ಬಂದಿರುವುದು ತಿಳಿದಿದೆಯೇ? ರಾಜ್ಯ ಹೆದ್ದಾರಿಯಾದ ಈ ರಸ್ತೆಯಲ್ಲಿ ಕಡೆಯ ಪಕ್ಷ ಚಿಕ್ಕನಾಯಕನ ಹಳ್ಳಿ ಭಾಗದ ರಸ್ತೆಯನ್ನಾದರೂ ದುರಸ್ಥಿ ಮಾಡಿಸಿ ಡಾಂಬರು ಹಾಕಿಸಲಾಗುವುದೇ?

ಶ್ರೀ ಜಿ. ಹೆಚ್. ಅಶ್ವತ್ಥ್ ರೆಡ್ಡಿ (ಲೋಕೋಪಯೋಗಿ ಸಚಿವರು):-

ಅ) ಮೂಡಿಗೆರೆ-ಚಿಕ್ಕಬಳ್ಳಾಪುರ ರಸ್ತೆಯು ೫೮ನೇ ಸಂಖ್ಯೆಯ ರಾಜ್ಯ ಹೆದ್ದಾರಿಯಾಗಿದೆ.

ಆ) ಈ ರಸ್ತೆಯು ವಾಹನ ಸಂಚಾರಕ್ಕೆ ಯೋಗ್ಯವಾಗಿದೆ. ಈ ರಸ್ತೆಯ ೪೦ ಕಿ. ಮಿ. ಉದ್ದದ ಭಾಗವು ಚಿಕ್ಕನಾಯಕನ ಹಳ್ಳಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುತ್ತಿದ್ದು, ಆಯ್ದ ಭಾಗಗಳ ರಸ್ತೆಯ ಡಾಂಬರೀಕರಣ ಹಾಗೂ ನಿರ್ವಹಣೆಯನ್ನು ಒಟ್ಟು ೯.೬೮ ಲಕ್ಷ ರೂ.ಗಳ ಅಂದಾಜಿನಲ್ಲಿ ತೆಗೆದುಕೊಂಡಿದ್ದು, ಕಾಮಗಾರಿಗಳು ಪ್ರಗತಿಯಲ್ಲಿವೆ.

ಚುಳುಕಿ ನೀರಾವರಿ ಕಾಮಗಾರಿಗಳು

೪೦೦ (೧೮೪೪)ಶ್ರೀ ಬಸವರಾಜ ಪಾಟೀಲ್ ಆಟ್ಟೂರ್ (ಬಸವಕಲ್ಯಾಣ):- ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಬೀದರ್ ಜಿಲ್ಲೆಯ ಚುಳುಕಿ ನೀರಾವರಿ ಕಾಮಗಾರಿಯನ್ನು ಪ್ರಸ್ತುತ ವರ್ಷ ಪ್ರಾರಂಭಿಸುವ